3745 (4367): ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟ)

ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿರಿಂಗ್ ರಾಜ್ಯ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ನದಿಗಳು ಹರಿದಿದ್ದರೂ ಬೇಸಿಗೆಯಲ್ಲಿ ಬಹಳಷ್ಟು ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದರೆ ಕುಡಿಯುವ ನೀರಿಗಾಗಿ ಶಾಶ್ವತ ಪರಿಹಾರಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ;

ಇ. ಅಂತರ್ಜಲ ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿರಿಂಗ್ ರಾಜ್ಯ ಸಚಿವರು)

ಅ. ಬಂದಿದೆ.

ಆ. ತುರ್ತು ಕುಡಿಯುವ ನೀರಿನ ಪರಿಹಾರಕ್ಕಾಗಿ ರಚಿಸಲಾಗಿರುವ ತಾಲ್ಲೂಕು ಮಟ್ಟದ ಕಾರ್ಯಪಡೆ ಸ್ಥಳೀಯ ಅವಶ್ಯಕತೆಯನುಸಾರ ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದೆ. ಶಾಶ್ವತ ಪರಿಹಾರಕ್ಕಾಗಿ ಭೂಮಿಯ ಮೇಲ್ಮೈ ಜಲಮೂಲಗಳನ್ನು ಆಧರಿಸಲಾಗುತ್ತಿದೆ. ಜೊತೆ ಜೊತೆಗೆ ಪುನಃಶ್ಚೇತನ ಕಾಮಗಾರಿಗಳು ಹಾಗೂ ಯೋಜನೆಗಳ ನಿರಂತರತೆಗಾಗಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಇ. ಅಂತರ್ಜಲ ಹೆಚ್ಚಿಸುವ ಸಲುವಾಗಿ ಕೆರೆಗಳಲ್ಲಿನ ಹೊಳೆತ್ತುವುದು, ಜಲಕರ್ಷಣೆ ಹಾಗೂ ಮಳೆ ನೀರಿನ ಸುಗ್ಗಿ ಕಾರ್ಯಕ್ರಮಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ.

3746 (4368): ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟ)

ಡಾ. ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. 2005–06ನೇ ಸಾಲಿಗೆ ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ಯೋಜನೆಗಳನ್ನು ಗ್ರಾಮ ಪಂಚಾಯತ್ ಮೂಲಕ ಅನುಷ್ಠಾನ ಮಾಡಲು ಆದೇಶವಾಗಿರುವುದು ಸರ್ಕಾರದ ಗಮನದಲ್ಲಿರುವುದೇ;